ಅ) ರಾಜ್ಯದ ಹಣಕಾಸು ಪರಿಸ್ಥಿತಿಯ ಬಗ್ಗೆ ಶಿಫಾರಸ್ಸು ಮಾಡಲು ಹಿಂದಿನ ಮುಖ್ಯ ಕಾರ್ಯದರ್ಶಿ ಶ್ರೀ ಟಿ.ಆರ್. ಸತೀಶ್‌ಚಂದ್ರ ಇವರ ನೇತೃತ್ವದಲ್ಲಿ ನೇಮಿಸಿದ ಆಯೋಗವು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುವರೆ;

ಆ) ಹಾಗಿದ್ದಲ್ಲಿ ಸದರಿ ವರದಿಯನ್ನು ಸಲ್ಲಿಸಿರುವುದು ಯಾವಾಗ;

ಇ) ಈ ಆಯೋಗವು ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಸುಧಾರಿಸುವುದಕ್ಕಾಗಿ ಸರ್ಕಾರಕ್ಕೆ ಕೊಟ್ಟಿರುವ ಸಲಹೆಗಳಾವುವು;

ಈ) ಸರ್ಕಾರವು ಈ ಆಯೋಗದ ವರದಿಯನ್ನು ಒಪ್ಪಿಕೊಂಡಿರುವರೆ ? ಈ ಆಯೋಗದ ಸಲಹೆಯನ್ನು ನೀಡಲು ಸಮಿತಿಯಲ್ಲಿದ್ದ ಸದಸ್ಯರಾರು;

ಉ) ಕೇರಳ ತಮಿಳುನಾಡು ಹಾಗೂ ಗುಜರಾತ್ ಸರ್ಕಾರಗಳು ತಮ್ಮ ಮಾರ್ಗದರ್ಶನಕ್ಕಾಗಿ ಈ ವರದಿಯನ್ನು ಕೇಳುತ್ತಿರುವ ಸಂಗತಿ ನಿಜವೆ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):-

ಅ) ಹೌದು

ಆ) ದಿನಾಂಕ 31-5-1991

ಇ) ಈ ವರದಿಯ ಮೇಲೆ ಸರ್ಕಾರವು ಸಂಬಂಧಪಟ್ಟ ಇಲಾಖೆಗಳಿಂದ ಅಭಿಪ್ರಾಯಗಳನ್ನು ಕೋರಿರುತ್ತೆ. ಸದರಿ ಅಭಿಪ್ರಾಯಗಳು ಇನ್ನೂ ಕೆಲವು ಇಲಾಖೆಗಳಿಂದ ಬಂದಿಲ್ಲದಿರುವ ಕಾರಣದಿಂದ ಸರ್ಕಾರವು ಇನ್ನೂ ಯಾವ ನಿರ್ಣಯವನ್ನು ತೆಗೆದುಕೊಂಡಿರುವುದಿಲ್ಲ.

ಈ) ಈ ಆಯೋಗದ ಸಲಹೆಯನ್ನು ನೀಡಲು ಆ ಸಮಿತಿಯಲ್ಲಿದ್ದ ಇತರ ಸದಸ್ಯರು; ಶ್ರೀ ಸಿ.ಎಸ್. ಸಾಮಿನಾಥನ್, ಭಾರತ ಸರ್ಕಾರದ ನಿವೃತ್ತ ಕಾರ್ಯದರ್ಶಿ, ಗಣಿ ಇಲಾಖೆ ಹಾಗೂ ಡಾ।। ಜಿ. ತಿಮ್ಮಯ್ಯ, ಕರ್ನಾಟಕ ಸರ್ಕಾರದ ಆರ್ಥಿಕ ಸಲಹೆಗಾರರು. ಶ್ರೀ ಅರವಿಂದ ಜಾಧವ್, ಸಹಕಾರ್ಯದರ್ಶಿ, ಆರ್ಥಿಕ ಇಲಾಖೆ ಆಯೋಗದ ಸದಸ್ಯ ಕಾರ್ಯದರ್ಶಿಯಾಗಿದ್ದರು.

ಈ ವಿಷಯವು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಕೆ.ಎಸ್.ಆರ್.ಟಿ.ಸಿ. ನೌಕರರಿಗೆ ಮಾಸಾಶನ

224 (851) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):-

ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೆ.ಎಸ್.ಆರ್.ಟಿ.ಸಿ. ನೌಕರರಿಗೆ ಮಾಸಾಶನ ಕೊಡಲಾಗುತ್ತಿದೆಯೆ;

ಆ) ಹಾಗಿಲ್ಲದಿದ್ದಲ್ಲಿ, ಸದರಿ ನೌಕರರಿಗೆ ಮಾಸಾಶನ ಕೊಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ;

ಇ) ಬೇರೆ ರಾಜ್ಯದಲ್ಲಿ ಸಾರಿಗೆ ನೌಕರರಿಗೆ ಮಾಸಾಶನ ಕೊಡಲಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):-

ಅ) ಇಲ್ಲಾ

ಆ) ಇಲ್ಲಾ

ಇ) ಪ್ರಾಪ್ತವಿರುವ ಮಾಹಿತಿ ಪ್ರಕಾರ ದೆಹಲಿ ಸಾರಿಗೆ ಸಂಸ್ಥೆಯಲ್ಲಿ ಪೆನ್‌ಷನ್ ಸ್ಕೀಂ ಅನ್ನು ಜಾರಿಗೆ ತರಲಾಗಿದೆ.

ಜನವರಿ 1989ರಿಂದ ಡಿಸೆಂಬರ್ 1992ರ ಅಂತ್ಯದವರೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಹಂಚಿಕೆಯಾದ ನಿವೇಶನಗಳು

238 (725) ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಜನವರಿ 1989ರಿಂದ ಡಿಸೆಂಬರ್ 1992ರ ಅಂತ್ಯದವರೆಗೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ವಿವೇಚನಾ ಪ್ರವರ್ಗದಲ್ಲಿ ಹಂಚಿಕೆ ಮಾಡಿದ ಒಟ್ಟು ನಿವೇಶನಗಳ ಸಂಖ್ಯೆ ಎಷ್ಟು;

ಆ) ಹೆಸರು, ವಿಳಾಸ ಮತ್ತು ನಿವೇಶನಗಳ ಅಳತೆ ಮತ್ತು ಪಾವತಿ ಮಾಡಿದ ನಿವೇಶನ ಮೌಲ್ಯದ ವಿವರಗಳನ್ನು ನೀಡುವುದು;

ಇ) ಈ ರೀತಿ ಹಂಚಿಕೆ ಮಾಡಿದ ನಿವೇಶನಗಳನ್ನು ರದ್ದುಪಡಿಸಿದ ಸಂಖ್ಯೆ ಎಷ್ಟು;

ಈ) ಬೆಂಗಳೂರು ನಗರದಲ್ಲಿ ನಿವೇಶನ ಮನೆಗಳನ್ನು ಹೊಂದಿರುವ ಬಗ್ಗೆ (ಕೆಲವು ಹಂಚಿಕೆದಾರರು) ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ ಇಂಥ ಹಂಚಿಕೆಗಳನ್ನು ರದ್ದುಪಡಿಸಲು ಉದ್ದೇಶಿಸಲ್ಪಟ್ಟ ಹೆಜ್ಜೆ ಯಾವುದು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):-

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು 1989ರಿಂದ ಯಾವುದೇ ಪ್ರಕಟಿತ ನಿವೇಶನಗಳನ್ನು ಹಂಚಿಕೆ ಮಾಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ

ಉ) ಉದ್ಭವಿಸುವುದಿಲ್ಲ

ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ಹೊಸ ಬಸ್ಸುಗಳ ಖರೀದಿ

239 (724) ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ):-

ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1992-93ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಎಷ್ಟು ಹೊಸ ಬಸ್ಸುಗಳನ್ನು ಖರೀದಿಸಲು ಉದ್ದೇಶಿಸಲಾಗಿದೆ;

ಆ) ಈ ಬಗ್ಗೆ ಟೆಂಡರ್‌ಗಳನ್ನು ಕರೆಯಲಾಗಿದೆಯೇ;